# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 198 |
| ಸದಸ್ಯರ ಹೆಸರು | ಶ್ರೀ ಮಧು.ಜಿ.ಮಾದೇಗೌಡ |
| ಉತ್ತರಿಸುವ ದಿನಾಂಕ | 06-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಯು ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಧಿಸೂಚಿಸಿರುವ ದೇವಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ವರ್ಗವಾರು ಮಾಹಿತಿ ನೀಡುವುದು) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಧಿಸೂಚಿಸಿರುವ ದೇವಾಲಯಗಳ ಸಂಖ್ಯೆ ಮತ್ತು ತಾಲ್ಲೂಕುವಾರು, ವರ್ಗವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಅಧಿಸೂಚಿಸಿದ ದೇವಾಲಯಗಳ ಪೈಕಿ ಸ್ಥಿರ ಆಸ್ತಿಗಳನ್ನು ಗುರುತಿಸಲಾದ ದೇವಾಲಯಗಳ ಸಂಖ್ಯೆ ಎಷ್ಟು; ಗುರುತಿಸಿರುವ ಆಸ್ತಿಗಳ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು; ಸ್ಥಿರ ಆಸ್ತಿಗಳನ್ನು ಗುರುತಿಸಲು ಬಾಕಿ ಇರುವ ದೇವಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ವರ್ಗವಾರು ಮಾಹಿತಿ ನೀಡುವುದು) | ಅಧಿಸೂಚಿಸಿದ ದೇವಾಲಯಗಳ ಪೈಕಿ ಸ್ಥಿರ ಆಸ್ತಿಗಳನ್ನು ಗುರುತಿಸಲಾದ ದೇವಾಲಯಗಳ ಸಂಖ್ಯೆ, ಗುರುತಿಸಿರುವ ಆಸ್ತಿಗಳ ಸಂಖ್ಯೆ ಮತ್ತು ವಿಸ್ತೀರ್ಣ ಈ ಕೆಳಕಂಡಂತೆ ಇದೆ. (see tables below) |

| ಪ್ರವರ್ಗ | ಸ್ಥಿರಾಸ್ತಿಗಳನ್ನು ಗುರುತಿಸಿರುವ ದೇವಾಲಯಗಳ ಸಂಖ್ಯೆ | ಆಸ್ತಿಗಳ ಸಂಖ್ಯೆ | ಜಿಲ್ಲಾಧಿಕಾರಿಗಳ ಕಚೇರಿಯಿಂದ ಸ್ವೀಕೃತವಾದಂತೆ ಅಂದಾಜು ವಿಸ್ತೀರ್ಣ (ಎಕರೆ-ಗುಂಟೆ) |
|---|---|---|---|
| ಎ | 197 | 1491 | 6323 |
| ಬಿ | 167 | 911 | 1555 |
| ಸಿ | 24686 | 27079 | 21209 |

ಸ್ಥಿರ ಆಸ್ತಿಗಳನ್ನು ಗುರುತಿಸಲು ಬಾಕಿ ಇರುವ ದೇವಾಲಯಗಳ ಸಂಖ್ಯೆ ವಿವರ

| ಪ್ರವರ್ಗ | ಸ್ಥಿರಾಸ್ತಿಗಳನ್ನು ಗುರುತಿಸಲು ಬಾಕಿಯಿರುವ ದೇವಾಲಯಗಳ ಸಂಖ್ಯೆ |
|---|---|
| ಎ | 8 |
| ಬಿ | 26 |
| ಸಿ | 9479 |

ಜಿಲ್ಲಾವಾರು ಘೋಷ್ವಾರೆಯನ್ನು ಹಾಗೂ ತಾಲ್ಲೂಕುವಾರು ಪ್ರವರ್ಗವಾರು ದೇವಾಲಯಗಳ ವಿವರವನ್ನು **ಸಿ.ಡಿ**ಯಲ್ಲಿ ಒದಗಿಸಿದೆ.

<table>
<tr>
<td>ಇ)</td>
<td>ಗುರುತಿಸಿರುವ ಸ್ಥಿರ ಆಸ್ತಿಗಳ ಪೈಕಿ ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಹಾಗೂ ಸರ್ವೆ ಕಾರ್ಯ ಪೂರೈಸಲು ಬಾಕಿ ಇರುವ ಆಸ್ತಿಗಳ ಸಂಖ್ಯೆ ಎಷ್ಟು:(ತಾಲ್ಲೂಕುವಾರು, ವರ್ಗವಾರು ಮಾಹಿತಿ ನೀಡುವುದು)</td>
<td>ಗುರುತಿಸಿರುವ ಸ್ಥಿರ ಆಸ್ತಿಗಳ ಪೈಕಿ ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಹಾಗೂ ಸರ್ವೆ ಕಾರ್ಯ ಪೂರೈಸಲು ಬಾಕಿ ಇರುವ ಆಸ್ತಿಗಳ ವಿವರ ಈ ಕೆಳಕಂಡಂತೆ ಇದೆ (ಜಿಲ್ಲಾವಾರು ಘೋಷ್ವಾರೆಯನ್ನು ಹಾಗೂ ತಾಲ್ಲೂಕುವಾರು ಪ್ರವರ್ಗವಾರು ದೇವಾಲಯಗಳ ವಿವರವನ್ನು ಸಿ.ಡಿಯಲ್ಲಿ ಒದಗಿಸಿದೆ.
<table>
<tr><th>ಪ್ರವರ್ಗ</th><th>ಅಳತೆ ಪೂರ್ಣಗೊಳಿಸಿದ ಆಸ್ತಿಗಳು ಸಂಖ್ಯೆ</th><th>ಅಳತೆಗೆ ಬಾಕಿ ಉಳಿದ ಆಸ್ತಿಗಳ ಸಂಖ್ಯೆ</th></tr>
<tr><td>ಎ</td><td>478</td><td>1013</td></tr>
<tr><td>ಬಿ</td><td>198</td><td>713</td></tr>
<tr><td>ಸಿ</td><td>6906</td><td>20173</td></tr>
</table>
</td>
</tr>
<tr>
<td>ಈ)</td>
<td>ಸರ್ವೆ ಕಾರ್ಯ ಮಂದಗತಿಯಲ್ಲಿ ಸಾಗಿರುವುದಕ್ಕೆ ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸಲಾಗುವುದು; (ವಿವರ ನೀಡುವುದ)</td>
<td>1. ಮೂಲತ: ಶೇಕಡ 75 ರಷ್ಟು ಆಸ್ತಿಗಳು ದೇವಾಲಯದ ಹೆಸರಿನಲ್ಲಿ ಖಾತೆಹೊಂದಿರುವುದಿಲ್ಲ.<br>2. ದೇವಾಲಯಗಳ ಬಹುತೇಕ ಜಮೀನುಗಳು ಸರ್ಕಾರಿ ಸರ್ವೆ ನಂಬರ್‌ಗಳಲ್ಲಿ ಅನುಭವ ಹೊಂದಿದ್ದು, ಸುಪರ್ದಿಯನ್ನು ಹೊಂದಿದ್ದರೂ ಸಹ ಈವರೆಗೆ ದೇವಾಲಯದ ಹೆಸರಿಗೆ ಖಾತೆ ಆಗಿರುವುದಿಲ್ಲ.<br>3. ಗ್ರಾಮಠಾಣ/ನಗರಸಭೆ/ಪಟ್ಟಣ ಪಂಚಾಯ್ತಿ/ಪುರಸಭೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ದೇವಾಲಯದ ಆವರಣ ಮತ್ತು ಜಮೀನು ಇದ್ದು, ದೇವಾಲಯದ ಹೆಸರಿಗೆ ಖಾತೆ ಇರುವುದಿಲ್ಲ.<br>4. ದೇವಾಲಯದ ಇನಾಂ ಜಮೀನುಗಳನ್ನು ಖಾಸಗಿಯವರಿಗೆ ನಿಯಮಾನುಸಾರ ಮರು ಮಂಜೂರು ಮಾಡಲಾಗಿದ್ದು, ಇದರಲ್ಲೇ ದೇವಾಲಯವು ಇರುವುದರಿಂದ ದೇವಾಲಯಕ್ಕೆ ಪ್ರತ್ಯೇಕ ಖಾತೆ ಆಗಿರುವುದಿಲ್ಲ.<br>5. ಅರಣ್ಯ ಪ್ರದೇಶಗಳಲ್ಲಿ ದೇವಾಲಯಗಳು ಆವರಣಗಳನ್ನು ಹೊಂದಿದ್ದು, ಖಾತೆ ಆಗಿರುವುದಿಲ್ಲ.<br>6. ಸರ್ಕಾರಿ ಜಮೀನುಗಳಲ್ಲಿ ದೇವಾಲಯದ ಹೆಸರಿಗೆ ಖಾತೆ ಇದ್ದರೂ ಪ್ರತ್ಯೇಕ ನಂಬರಾಗಿ ದುರಸ್ತಾಗಿರುವುದಿಲ್ಲ.<br>7. ಕೆಲವೊಂದು ಪಹಣಿಗಳಲ್ಲಿ ಸರ್ಕಾರಿ ಬೀಳು ಅಥವಾ ಸರ್ಕಾರಿ ಖರಾಬು/ಗೋಮಾಳ/ ಅಥವಾ ಖಾಸಗಿ ವ್ಯಕ್ತಿಯೊಂದಿಗೆ ದೇವಾಲಯದ ಹೆಸರು ಜಂಟಿ ಖಾತೆಯಲ್ಲಿ ದಾಖಲಿದ್ದು, ದೇವಾಲಯಕ್ಕೆ ಪ್ರತ್ಯೇಕ ವಿಸ್ತೀರ್ಣ ದಾಖಲಿಸಿರುವುದಿಲ್ಲ.</td>
</tr>
</table>

| | | |
|---|---|---|
| | | 8. ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ದೇವಾಲಯಗಳ ಪಹಣಿಯಲ್ಲಿ ಮೂಲಗೇಣಿದಾರರ ಹೆಸರನ್ನು ಪಹಣಿಯ 11ನೇ ಕಾಲಂನಲ್ಲಿ ದಾಖಲಿಸುವ ಬದಲು ಕಾಲಂ ನಂ-9ರಲ್ಲಿ ದೇವಾಲಯದ ಹೆಸರಿನೊಂದಿಗೆ ಜಂಟಿಯಾಗಿ ದಾಖಲಿಸಿರುತ್ತಾರೆ.<br>9. ದೇವಾಲಯಗಳ ಜಮೀನುಗಳಲ್ಲಿ ಆಗಿರುವ ಭೂ ಸ್ವಾಧೀನಗಳನ್ನು ಪಹಣಿಯಲ್ಲಿ ಇಂಡೀಕರಿಸಿರುವುದಿಲ್ಲ ಹಾಗೂ ಪರಿಹಾರವನ್ನು ಸಹ ನೀಡಿರುವುದಿಲ್ಲ.<br>10. ಆಕಾರಬಂದ್ ವಿಸ್ತೀರ್ಣಕ್ಕೆ ಮತ್ತು ಪಹಣಿ ವಿಸ್ತೀರ್ಣಕ್ಕೆ ತಾಳೆ ಇರುವುದಿಲ್ಲ.<br>11. ಸರ್ವೆ ಇಲಾಖೆಯಲ್ಲಿ ಅಳತೆಗೆ ಅರ್ಜಿ ಸಲ್ಲಿಸಲು ಮಾಲೀಕತ್ವದ ದಾಖಲೆಗಳ ಅವಶ್ಯಕತೆ ಇದೆ ಹಾಗೂ ರೆವಿನ್ಯೂ ದಾಖಲೆಗಳಲ್ಲಿ ತೊಡಕಿರುವ ಪ್ರಕರಣಗಳನ್ನು ಅಳತೆ ಮಾಡಲಾಗುವುದಿಲ್ಲ. ಕಾರಣ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಂಡ ನಂತರ ಅಳತೆ ಮಾಡಿಸಲು ಕ್ರಮ ಜರುಗಿಸಲಾಗುತ್ತದೆ. |
| ಉ) | ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಸ್ಥಿರ ಆಸ್ತಿಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | • 'ಎ' ಮತ್ತು 'ಬಿ' ಪ್ರವರ್ಗದ ದೇವಾಲಯಗಳ ಜಮೀನುಗಳಿಗೆ ಬೇಲಿಗಳನ್ನು ನಿರ್ಮಿಸಲಾಗುತ್ತಿದೆ.<br>• 'ಸಿ' ಪ್ರವರ್ಗದ ದೇವಾಲಯಗಳ ಆಸ್ತಿಗಳ ಬಗ್ಗೆ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br>• ದೇವಾಲಯದ ಜಮೀನುಗಳನ್ನು ದೇವರ ಹೆಸರಿಗೆ ಖಾತೆ ಮಾಡಿಸಲು ಕ್ರಮ ಜರುಗಿಸಲಾಗುತ್ತಿದೆ.<br>• ಸರ್ವೆ ಕಾರ್ಯ ಪೂರ್ಣಗೊಂಡಿರುವ ಆಸ್ತಿಗಳನ್ನು ದೇವಾಲಯಗಳ ಹೆಸರಿಗೆ Flag ಮಾಡಿಸಲು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.<br>• ಅಧಿಸೂಚಿತ ದೇವಸ್ಥಾನಕ್ಕೆ ಸೇರಿದ ಸ್ಥಿರ ಸ್ವತ್ತುಗಳ ನಿರ್ವಹಣೆ ಸಂಬಂಧ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿ.ಯ ಮೂಲಕ ಆನ್‌ಲೈನ್ ತಂತ್ರಾಂಶ (Integrated Temple Management System/ITMS) ಅನ್ನು ಜಾರಿಗೆ ತರಲಾಗಿದೆ. ಸದರಿ ತಂತ್ರಾಂಶದಲ್ಲಿ ಹಂತ-ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್‌ಗಳನ್ನು ಅಭಿವೃದ್ಧಿ ಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. |

- ಅಧಿಸೂಚಿತ ದೇವಸ್ಥಾನದ ಜಾಗಗಳಲ್ಲಿನ ಒತ್ತುವರಿದಾರರು/ ಅನಧಿಕೃತದಾರರನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಮಾನ್ಯ ಉಚ್ಚನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಕಂಡಿಕೆವಾರು ಆಕ್ಷೇಪಣೆಗಳನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ ಕಂಇ.49 ಮುಆಬಿ 2021 ಬೆಂಗಳೂರು ದಿನಾಂಕ:05-09-2022ರ ಆದೇಶದಂತೆ ಮುಜರಾಯಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ "ಎ" ಮತ್ತು "ಬಿ" ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ/ ನಗರ ಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ "ಸಿ"-ಶ್ರೇಣಿಯ ಮುಜರಾಯಿ ಆಸ್ತಿಗಳ ಬಾಬ್ತು ಹಕ್ಕು ದಾಖಲೆಗಳ ಇಂಡೀಕರಣ ಅಳತೆ ಕಾರ್ಯ ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಿ ಮುಜರಾಯಿ ಇಲಾಖೆಯ ನಂತರ ಗ್ರೂಫ್ 'ಸಿ' ಶ್ರೇಣಿಯ ದೇವಾಲಯಗಳ ಹಕ್ಕು ದಾಖಲೆಗಳ ಇಂಡೀಕರಣ ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ ಕಾರ್ಯರೂಪಕ್ಕೆ ತರಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.

ಅದರಂತೆ ಮುಜರಾಯಿ ಇಲಾಖೆಯ ಸ್ಥಿರಾಸ್ತಿಗಳ ಸಂರಕ್ಷಣೆ ಕಾರ್ಯಗಳಾದ ಕಂದಾಯ ಇಲಾಖೆಗಳ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ಈ ಕೆಳಕಂಡ ರಾಜ್ಯ ಮಟ್ಟದ/ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಸರ್ಕಾರದಿಂದ ಆದೇಶಿಸಲಾಗಿದೆ. ಈ ಸಂಬಂಧ ಸಭೆಯನ್ನು ಜರುಗಿಸಿ ಜಿಲ್ಲಾಮಟ್ಟದಲ್ಲಿ ಕ್ರಮ ವಹಿಸಲಾಗಿದೆ.

**ರಾಜ್ಯ ಮಟ್ಟದ ಸಮಿತಿ:-**

| | | |
|---|---|---|
| 1. | ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ. | ಅಧ್ಯಕ್ಷರು |
| 2. | ಆಯುಕ್ತರು, ಭೂ ಮಾಪನ ಇಲಾಖೆ | ಸದಸ್ಯರು |
| 3. | ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ | ಸದಸ್ಯರು |

| | | |
|---|---|---|
| 4. | ಜಂಟಿ ನಿರ್ದೇಶಕರು, ಭೂ ಮಾಪನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಮಟ್ಟದ ಸಮಿತಿ**

| | | |
|---|---|---|
| 1. | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2. | ಅಪರ ಜಿಲ್ಲಾಧಿಕಾರಿ | ಸದಸ್ಯರು |
| 3. | ಉಪ ವಿಭಾಗಾಧಿಕಾರಿ | ಸದಸ್ಯರು |
| 4. | ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಸ್ಥಳೀಯ ಸಂಸ್ಥೆ ಕೋಶ (ಸ್ಥಳೀಯ ಸಂಸ್ಥೆ) | ಸದಸ್ಯರು |
| 5. | ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

ಸಂಖ್ಯೆ: ಕಂಇ 109 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

LC · 198 ಅನುಬಂಧ

-ಅನುಬಂಧ-

**ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ತಾಲ್ಲೂಕುವಾರು ಅಂಕಿ ಅಂಶಗಳ ವಿವರದ ತಃಖ್ತೆ**

(ಸರ್ಕಾರದ ಅಧಿಸೂಚನೆ ಸಂಖ್ಯೆ:RD 87 MUAABI 2012 DT:29.09.2012 ರಂದು ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ ಆಧಾರದ ಮೇರೆಗೆ )

| ಕ್ರ ಸಂ | ತಾಲ್ಲೂಕು | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿರುವ ದೇವಾಲಯಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ ಮಾಡಲಾದ ಸಂಸ್ಥೆಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲಾದ ಸಂಸ್ಥೆಗಳ ಸಂಖ್ಯೆ | ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| | ಚಾಮರಾಜನಗರ ಜಿಲ್ಲೆ | | | | |
| 1 | ಚಾಮರಾಜನಗರ | 172 | 0 | 0 | 172 |
| 2 | ಯಳಂದೂರು | 62 | 0 | 0 | 62 |
| 3 | ಕೊಳ್ಳೇಗಾಲ | 141 | 0 | 0 | 141 |
| 4 | ಗುಂಡ್ಲುಪೇಟೆ | 39 | 0 | 0 | 39 |
| | ಒಟ್ಟು | 414 | 0 | 0 | 414 |
| | ಹಾಸನ ಜಿಲ್ಲೆ | | | | |
| 1 | ಅರಕಲಗೂಡು | 270 | 0 | 01 | 269 |
| 2 | ಆಲೂರು | 117 | 0 | 0 | 117 |
| 3 | ಹೊಳೆನರಸೀಪುರ | 219 | 01 | 0 | 220 |
| 4 | ಅರಸೀಕೆರೆ | 341 | 0 | 0 | 341 |
| 5 | ಸಕಲೇಶಪುರ | 28 | 0 | 0 | 28 |
| 6 | ಚನ್ನರಾಯಪಟ್ಟಣ | 548 | 13 | 0 | 561 |
| 7 | ಬೇಲೂರು | 370 | 0 | 0 | 370 |
| 8 | ಹಾಸನ | 550 | 0 | 0 | 550 |
| | ಒಟ್ಟು | 2443 | 14 | 01 | 2456 |
| | ಮಂಡ್ಯ ಜಿಲ್ಲೆ | | | | |
| 1 | ಮಂಡ್ಯ | 278 | 13 | 0 | 291 |
| 2 | ಶ್ರೀರಂಗಪಟ್ಟಣ | 139 | 08 | 0 | 147 |
| 3 | ಕೆ.ಆರ್.ಪೇಟೆ | 334 | 08 | 01 | 341 |
| 4 | ಮದ್ದೂರು | 280 | 05 | 0 | 285 |
| 5 | ಮಳವಳ್ಳಿ | 257 | 08 | 0 | 265 |
| 6 | ಪಾಂಡವಪುರ | 200 | 29 | 0 | 229 |
| 7 | ನಾಗಮಂಗಲ | 520 | 42 | 0 | 562 |
| | ಒಟ್ಟು | 2008 | 113 | 01 | 2120 |
| | ಮೈಸೂರು ಜಿಲ್ಲೆ | | | | |
| 1 | ಮೈಸೂರು | 357 (334+24) | 0 | 02 | 355 |
| 2 | ಕೆ.ಆರ್.ನಗರ | 197 | 0 | 0 | 197 |
| 3 | ಹುಣಸೂರು | 121 | 0 | 0 | 121 |
| 4 | ಹೆಚ್.ಡಿ.ಕೋಟೆ | 157 | 0 | 0 | 157 |
| 5 | ಪಿರಿಯಾಪಟ್ಟಣ | 169 | 01 | 0 | 170 |
| 6 | ಟಿ.ನರಸೀಪುರ | 165 | 0 | 01 | 164 |
| 7 | ನಂಜನಗೂಡು | 147 | 01 | 01 | 147 |
| | ಒಟ್ಟು | 1313 | 02 | 04 | 1311 |